# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1275 (1413) |
| ಸದಸ್ಯರ ಹೆಸರು | : | ಶ್ರೀ ಪಿ.ಹೆಚ್.ಪೂಜಾರ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸ ಬೇಕಾದ ದಿನಾಂಕ | : | 18.12.2025 |
| ಉತ್ತರಿಸುವ ಸಚಿವರು | : | ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬಾಗಲಕೋಟೆ ತಾಲ್ಲೂಕಿನ ಪುರಾತನ ಪ್ರಸಿದ್ಧ ತಾಣವಾದ ಗುಡ್ಡದ ಮಲ್ಲಿಕಾರ್ಜುನ ಸ್ವಾಮಿ ಪ್ರವಾಸಿ ತಾಣ ಹಾಗೂ ಇನ್ನಿತರ ಮೂಲಭೂತ ಸೌಕರ್ಯ ಕಲ್ಪಿಸುವ ದೃಷ್ಟಿಯಿಂದ ಇಲ್ಲಿಯವರೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಹಾಗೂ ಸದರಿ ಪ್ರವಾಸಿ ತಾಣದ ಅಭಿವೃದ್ಧಿಯ ಪ್ರಗತಿ ಏನು; (ಮಾಹಿತಿ ನೀಡುವುದು) | ಪ್ರಸ್ತುತ ಬಾಗಲಕೋಟೆ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ಶಾಖೆಯ ವತಿಯಿಂದ ಸದರಿ ಮಲ್ಲಿಕಾರ್ಜುನ ದೇವಸ್ಥಾನಕ್ಕೆ ಬಾಗಲಕೋಟೆ ತಾಲ್ಲೂಕಿನ ಹೊನ್ನಾಕಟ್ಟಿ ಗ್ರಾಮದಿಂದ ರಸ್ತೆ ಸಂಪರ್ಕ ಕಲ್ಪಿಸಲು ರೂ.250.00 ಲಕ್ಷಗಳ ಅಂದಾಜು ಮೊತ್ತದ ಟೆಂಡರ್ ಕರೆದು ಏಜೆನ್ಸಿ ಆಯ್ಕೆ ಮಾಡಿ ಕಾರ್ಯಾದೇಶ ನೀಡಲಾಗಿರುತ್ತದೆ. ಸದರಿ ರಸ್ತೆ ಕಾಮಗಾರಿಗಾಗಿ ಅರಣ್ಯ ಇಲಾಖೆಯ ಜಮೀನನ್ನು ಬಳಸಿಕೊಳ್ಳಲು 'ಪರಿವೇಶ' (PORTAL) ಮೂಲಕ ಅನುಮತಿಗಾಗಿ ಕೋರಲಾಗಿರುತ್ತದೆ. ಆದರೆ ಇದಕ್ಕೆ ಪರಿಹಾರಾತ್ಮಕವಾಗಿ ನೆಡುತೋಪು ಬೆಳೆಸಲು 4.5 ಹೆಕ್ಟೇರ್ ಜಮೀನನ್ನು ಒದಗಿಸುವಂತೆ ಕೋರಿರುತ್ತಾರೆ. ಸದರಿ ಕೋರಿಕೆಯಂತೆ ಜಮೀನು ಒದಗಿಸಲು ತಹಸೀಲ್ದಾರ ಬಾಗಲಕೋಟೆ ಇವರಲ್ಲಿ ಕೋರಲಾಗಿರುತ್ತದೆ<br><br>ಬಾಗಲಕೋಟೆ ತಾಲೂಕಿನ ಪುರಾತನ ಪ್ರಸಿದ್ಧ ತಾಣವಾದ ಗುಡ್ಡದ ಮಲ್ಲಿಕಾರ್ಜುನ ಸ್ವಾಮಿ ಪ್ರವಾಸಿ ತಾಣ ಹಾಗೂ ಇನ್ನಿತರ ಮೂಲಭೂತ ಸೌಕರ್ಯಗಳನ್ನು ಪ್ರವಾಸೋದ್ಯಮ ಇಲಾಖೆಯಿಂದ ಕಲ್ಪಿಸುವ ದೃಷ್ಟಿಯಿಂದ ಯೋಜನಾ ನಿರ್ದೇಶಕರು, ನಿರ್ಮಿತಿ ಕೇಂದ್ರ, ಬಾಗಲಕೋಟೆ ಇವರಿಂದ ಈ ಕೆಳಕಂಡ ಅಭಿವೃದ್ಧಿ ಕಾಮಗಾರಿಗಳಿಗೆ ವಿವರವಾದ ಯೋಜನಾ ವರದಿಯನ್ನು ತಯಾರಿಸಲು ಕ್ರಮವಹಿಸಲಾಗುತ್ತಿದೆ.<br><br>1. ಉದ್ಯಾನವನ ಅಭಿವೃದ್ಧಿ<br>2. ಯಾತ್ರಿ ನಿವಾಸ<br>3. ಹಿನ್ನೀರಿನ ನಡುಗಡ್ಡೆಯಲ್ಲಿರುವ ಹನುಮಂತನ ಗುಡಿಯ ಬಳಿ ಬೃಹತ್ತಾದ ಹನುಮಂತನ ಮೂರ್ತಿ<br>4. ದೇವಸ್ಥಾನದ ಬಳಿ ಶಿವನ ಮೂರ್ತಿ<br>5. ಶೌಚಾಲಯ ಹಾಗೂ ಕುಡಿಯುವ ನೀರಿನ ವ್ಯವಸ್ಥೆ.<br>6. ಮಲ್ಲಯ್ಯನ ಗುಡ್ಡದ ಬೇಸ್ ಪಾಯಿಂಟ್ ನಿಂದ ಗುಡ್ಡದ ಮೇಲಿನ ಪುರಾತನ ಮಂದಿರದವರೆಗೆ ಹೋಗಲು ಆರಾಮದಾಯಕ ಮೆಟ್ಟಿಲು ಹಾಗೂ ದಾರಿ ನಿರ್ಮಿಸುವುದು.<br>7. ಮಾಹಿತಿ ಫಲಕಗಳು<br>8. ಬಾಗಲಕೋಟೆ ಪಟ್ಟಣದ ಶಿರೂರು ರೈಲ್ವೆ ಗೇಟ್ |

| | | |
|---|---|---|
| | | ನಿಂದ ಮಲ್ಲಯ್ಯನ ಗುಡ್ಡ ದೇವಸ್ಥಾನಕ್ಕೆ ಹಾಗೂ ಹೊನ್ನಾಕಟ್ಟಿ ಕ್ರಾಸ್ ನಿಂದ ಮಲ್ಲಯ್ಯನ ಗುಡ್ಡ ದೇವಸ್ಥಾನಕ್ಕೆ ಸಂಪರ್ಕಿಸುವ ರಸ್ತೆಗಳಲ್ಲಿ ಸ್ವಾಗತ ಕಮಾನ್<br>9. ವೀಕ್ಷಣಾ ಗೋಪುರ<br>10. ಫುಡ್ ಕೋರ್ಟ್<br>11. ಹಿನ್ನೀರಿನಲ್ಲಿ ಬೋಟಿಂಗ್ ಚಟುವಟಿಕೆ ಕೈಗೊಳ್ಳುವುದು<br>12. ಬಾಗಲಕೋಟೆ ಪಟ್ಟಣದ ಶಿರೂರು ರೈಲ್ವೆ ಗೇಟ್ ನಿಂದ ಮಲ್ಲಯ್ಯನ ಗುಡ್ಡಕ್ಕೆ ರಸ್ತೆ ನಿರ್ಮಿಸುವುದು. |

**ಸಂಖ್ಯೆ:ಟಿಓಆರ್ 304 ಟಿಡಿವಿ 2025**

**(ಎಚ್.ಕೆ.ಪಾಟೀಲ್)**
ಕಾನೂನು, ನ್ಯಾಯ, ಮಾನವ ಹಕ್ಕುಗಳು,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ
ಹಾಗೂ ಪ್ರವಾಸೋದ್ಯಮ ಸಚಿವರು